## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 16.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ.ಎಸ್ ವಿ ಎಸ್ ವಕೀಲರಿಂದಃ**

ನಾನು ಕೆ ಎಸ್ ಆರ್ ಟಿ ಸಿ ಯಲ್ಲಿ ಚಾಲಕ ಮತ್ತು ನಿರ್ವಾಹಕನಾಗಿದ್ದೇನೆ. ದಿಃ06/04/2006 ರಿಂದ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ವಿಭಾಗ ಡಿಪೋನಲ್ಲಿ ಇದುವರೆಗೂ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಅಪಘಾತವಾಗುವ ಸಮಯದಲ್ಲಿ ನಾನೇ ಬಸ್ ಚಾಲಕನಾಗಿದ್ದೇನು. ದಿಃ11/12/2022 ರಂದು ಅಪಘಾತವಾಗಿರುತ್ತದೆ. ಆ ದಿನ ಸುಮಾರು 20 ಜನ ಬಸ್ ನಲ್ಲಿ ಪ್ರಯಾಣ ಮಾಡುತ್ತಿದ್ದರು. ಆ ದಿನ ಸದಾಶಿವ ಕಾಗದಾಳ ಎಂಬುವವರು ಬಸ್ ನಿರ್ವಾಹಕರಾಗಿದ್ದರು. ಆ ದಿನ ನಾನು ಅತೀ ವೇಗದಿಂದ ಹಾಗೂ ನಿಶ್ಕಾಳಜಿತನದಿಂದ ಬಸ್ ಚಾಲನೆ ಮಾಡಿಕೊಂಡು ಬರುತ್ತಿದ್ದೆ ಎಂದರೆ ಸರಿಯಲ್ಲ. ಆ ದಿನ ನಾನು ಸಂಚಾರಿ ನಿಯಮಗಳನ್ನು ಪಾಲನೆ ಮಾಡದೇ ಬಸ್ ಚಾಲನೆ ಮಾಡುತ್ತಿದ್ದೇನು ಎಂದರೆ ಸರಿಯಲ್ಲ. ಅಪಘಾತದಲ್ಲಿ ಒಳಗೊಂಡು ಇನ್ನೊಂದು ವಾಹನದ ಚಾಲಕ ನನಗೆ ಗೊತ್ತಿಲ್ಲ. ಆ ದಿನ ಸದರಿ ವಾಹನವನ್ನು ಶಂಕ್ರಪ್ಪ ಶೀಲಪ್ಪ ಕಡಬುಡ ಅಂದರೆ ಎಂವಿಸಿ ನಂ.185/2023 ರಲ್ಲಿನ ಅರ್ಜಿದಾರರು ಚಾಲನೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿದಾರರು ತಮ್ಮ ವಾಹನವನ್ನು ನಿಧಾನವಾಗಿ ರಸ್ತೆಯ ಎಡಬದಿಯಲ್ಲಿ ಚಾಲನೆ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಅವರು ನಿಧಾನವಾಗಿ ಹಾಗೂ ಎಡಬದಿಯಲ್ಲಿ ಚಾಲನೆ ಮಾಡಿಕೊಂಡು ಬರುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಬಸ್ ಅತೀ ವೇಗದಿಂದ ಹಾಗೂ ನಿಶ್ಕಾಳಜಿತನದಿಂದ ಬಸ್ ಚಾಲನೆ ಮಾಡಿಕೊಂಡು ಬಂದು ಅರ್ಜಿದಾರರ ವಾಹನಕ್ಕೆ ಡಿಕ್ಕಿಪಡಿಸಿದ ಕಾರಣ ಅವರಿಗೆ ಗಾಯಗಳಾಗಿವೆ ಎಂದರೆ ಸರಿಯಲ್ಲ. ನಾನೇ ಅಪಘಾತಪಡಿಸಿದ ಕಾರಣ ಅರ್ಜಿದಾರರಿಗೆ ಗಾಯ ಆಗಿದ್ದರೂ ಸಹ ನನ್ನ ತಪ್ಪು ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಅರ್ಜಿದಾರರರ ಚಿಕಿತ್ಸೆಗೆ 3,50,000/- ರೂ. ಖರ್ಚು ಆಗಿದೆ ಎಂದರೆ ಸಾಕ್ಷಿ ಅಷ್ಟೊಂದು ಆಗಿಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರರ ಮನೆಯಲ್ಲಿ ಅವರನ್ನು ಹೊರತುಪಡಿಸಿ ಬೇರೆ ದುಡಿಯುವ ಸದಸ್ಯರು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತವಾದ ಕಾರಣ ಅರ್ಜಿದಾರರು ದುಡಿಯುವ ಸಾಮರ್ಥ್ಯ ಕಳೆದುಕೊಂಡಿರುತ್ತಾರೆಂದರೆ

ಸಾಕ್ಷಿ ಅವರಿಗೆ ಅಷ್ಟೊಂದು ಗಾಯಗಳಾಗಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯ ಸುಳ್ಳು ಇವೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಸಹ ಹಾಗೂ ಅರ್ಜಿದಾರರಿಗೆ ಆದ ಹಾನಿಗೆ ನಾನು ಹಾಗೂ ನಮ್ಮ ಇಲಾಖೆಯವರು ಪರಿಹಾರ ಕೊಡಬೇಕಾಗಿದ್ದರೂ ಸಹ ತಪ್ಪಿಸುವ ಉದ್ದೇಶದಿಂದ ಅಪಘಾತ ನನ್ನ ತಪ್ಪಿನಿಂದ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**